**ಮೂ.ದಾ.ನಂ.78/2017**

ಪಿ.ಡಬ್ಲ್ಯು.1

(ಇಂದು ದಿನಾಂಕ: **01-12-2025** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ 3ನೇ ಪ್ರತಿವಾದಿ ಪರ ಶ್ರೀ. ಎಮ್.ಎನ್.ಎಸ್. ವಕೀಲರಿಂದಃ**

ಬರ್ಗಿ ಗ್ರಾಮದ ಸರ್ವೆ ನಂಬರ 35/17 3ನೇ ಪ್ರತಿವಾದಿಯರ ಕುಟುಂಬದ ಆಸ್ತಿ ಆಗಿತ್ತು ಎಂದರೆ ಸರಿ. ಅವರ ಕುಟುಂಬದಲ್ಲಿ ಆದ ವಾಂಟಣಿಯಂತೆ ಸರ್ವೆ ನಂಬರ 35/17 ರ 19 ಗುಂಟೆ ಜಾಗವನ್ನು 3ನೇ ಪ್ರತಿವಾದಿಯರ ಪಾಲಿಗೆ ವಿಂಗಡಿಸಲಾಯಿತು ಎಂದರೆ ಸರಿ. 3ನೇ ಪ್ರತಿವಾದಿಯು ನೌಕರಿಗಾಗಿ ಹೊರಗಡೆ ವಾಸ್ತವ್ಯದಲ್ಲಿ ಇದ್ದರು ಎಂದರೆ ಸರಿ. ಆ ಕಾರಣದಿಂದ 3ನೇ ಪ್ರತಿವಾದಿಯರ ಪಾಲಿಗೆ ಬಂದ ಆಸ್ತಿಯಲ್ಲಿ ಅವರು ಕಬ್ಜಾ ವಹಿವಾಟನ್ನು ಮಾಡಿಕೊಂಡಿದ್ದಾರೆ ಎಂದರೆ ಸರಿ.

ಬರ್ಗಿ ಗ್ರಾಮದ ಸರ್ವೆ ನಂಬರ 36/1 ಕ್ಷೇತ್ರ 00-09-12 ಖರಾಬು 00-01-00 ಉಳಿದಿದ್ದು 0-8-0 ಕ್ಷೇತ್ರವು ನನ್ನ ಹೆಸರಿಗೆ ಡಿಕ್ರಿಯಾಗಿರುತ್ತದೆ. ನಾನು ಸದ್ರಿ ಜಾಗದಲ್ಲಿ ಮೊದಲಿನಿಂದಲೂ ವಾಸ್ತವ್ಯದಲ್ಲಿ ಇದ್ದೇನೆ. ನಾಡವರ ಕೇರಿ ಓಣಿ ದಾರಿಯಿಂದ ನನ್ನ ಬಾಬ್ತು ಸರ್ವೆ ನಂಬರ 36/1 ಕ್ಕೆ ಬರಲು ಸರ್ವೆ ನಂಬರ 35/17 ರಲ್ಲಿ ಬರಲು ದಾರಿ ಇದೆ ಎಂದರೆ ಸರಿ. ನನಗೆ ನಾಡವರ ಕೇರಿ ಓಣಿಗೆ ಹೋಗಲು ಈ ರಸ್ತೆಯನ್ನು ಹೊರತುಪಡಿಸಿ ಬೇರೆ ಯಾವುದೇ ರಸ್ತೆ ಇರುವುದಿಲ್ಲ.

ನನ್ನ ಬಾಬ್ತು ಸರ್ವೆ ನಂಬರಗೆ ಬರ್ಗಿ ಗ್ರಾಮದ ಸರ್ವೆ ನಂಬರ 35/17 ರಿಂದ ಹೋಗಿ ಬರಲು 3ನೇ ಪ್ರತಿವಾದಿಯು ಯಾವುದೇ ತೊಂದರೆಯನ್ನು ಮಾಡಿರುವುದಿಲ್ಲ. ಬರ್ಗಿ ಗ್ರಾಮದ ಸರ್ವೆ ನಂಬರ 35/17 ನ್ನು 3ನೇ ಪ್ರತಿವಾದಿಯು ನೌಕರಿಗಾಗಿ ಬೇರೆ ಊರಲ್ಲಿ ವಾಸ್ತವ್ಯ ಇರುವುದರಿಂದ ದಿನಾಂಕಃ

**ಮೂ.ದಾ.ನಂ.78/2017**

ಪಿ.ಡಬ್ಲ್ಯು.1

17/11/2014 ರಂದು 1ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. 1ನೇ ಪ್ರತಿವಾದಿಯವರಿಂದ 2ನೇ ಪ್ರತಿವಾದಿಯರು ದಾನ ಮಾಡಿದ ನಂತರದಲ್ಲಿ ನನಗೆ ಸದ್ರಿ ದಾರಿಯನ್ನು ಉಪಯೋಗಿಸಲು ತೊಂದರೆಯನ್ನು ಉಂಟು ಮಾಡಿದ್ದಾರೆ. 2ನೇ ಪ್ರತಿವಾದಿಯು ನನಗೆ ತಕರಾರು ಮಾಡಿದ ಕುರಿತಾಗಿ 3ನೇ ಪ್ರತಿವಾದಿಗೆ ಹೇಳಿರುತ್ತೇನೆ. ನಂತರ 3ನೇ ಪ್ರತಿವಾದಿಯು ದಾರಿ ಇದೆ ಎಂದು 2ನೇ ಪ್ರತಿವಾದಿಗೆ ಹೇಳಿರುತ್ತಾರೆ. 3ನೇ ಪ್ರತಿವಾದಿಯು ಹಬ್ಬದ ಸಮಯದಲ್ಲಿ ಈ ವಿಷಯವನ್ನು ಹೇಳಿರುತ್ತಾರೆ.

3ನೇ ಪ್ರತಿವಾದಿಯು ಬರ್ಗಿ ಗ್ರಾಮದ ಸರ್ವೆ ನಂಬರ 35/17 ರಲ್ಲಿ ದಾರಿ ಇದ್ದ ಬಗ್ಗೆ ಬಾಂಡ ಮುಖಾಂತರ ಬರೆದುಕೊಟ್ಟಿರುತ್ತಾರೆ. ನಂತರ 3ನೇ ಪ್ರತಿವಾದಿಯರು 1 ಹಾಗೂ 2ನೇ ಪ್ರತಿವಾದಿಯರಿಗೆ ರಸ್ತೆ ಇದ್ದ ಕುರಿತಾಗಿ ತಿಳಿಸಿರುತ್ತಾರೆ.

**ಮರು ವಿಚಾರಣೆ ಇಲ್ಲ.**

**(ಈ ಹಂತದಲ್ಲಿ 1 ಹಾಗೂ 2ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

**ಸಹಿ ಇದೆ.**

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ